## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13ನೇ ಸಾಲಿನ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕೇಂದ್ರ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ಕೇಂದ್ರ ಸರ್ಕಾರದ ಪತ್ರಸಂಖ್ಯೆ:20014/02/2012/ ಎಜುಕೇಷನ್, ದಿನಾಂಕ:25.06.2012

2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರ ಪತ್ರಸಂಖ್ಯೆ: ಪವಕನಿ:ಇಡಿ-4: ಸಿಆರ್-2:2012-13, ದಿನಾಂಕ: 16-08-2012 ಮತ್ತು 07-03-2013.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ದಿನಾಂಕ:25.06.2012ರ ಪತ್ರದಲ್ಲಿ ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು 2012-13ನೇ ಸಾಲಿನ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮೊದಲನೇ ಕಂತಾಗಿ ಅಡ್‌ಹಾಕ್ ಮೊತ್ತ ರೂ.1479.88 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ಈ ಮೊತ್ತವು ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ದಿನಾಂಕ: 10.09.2012 ರನ್ವಯ ರಾಜ್ಯ ಸರ್ಕಾರಕ್ಕೆ ಜಮೆಯಾಗಿರುತ್ತದೆ.

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿನ ದಿನಾಂಕ:16.08.2012ರ ಮತ್ತು 07.03.2013 ಪತ್ರಗಳಲ್ಲಿ ಪ್ರಸ್ತುತ ಜಿಲ್ಲಾವಲಯ ಯೋಜನಾ ಲೆಕ್ಕಶೀರ್ಷಿಕೆಯಡಿ ನಿಗದಿಪಡಿಸಿರುವ ರೂ.4893.92 ಲಕ್ಷಗಳಲ್ಲಿ ಬಿಡುಗಡೆಗೆ ಲಭ್ಯವಿರುವ ರೂ.616.91 ಲಕ್ಷಗಳು ಮತ್ತು 2012-13ನೇ ಸಾಲಿಗೆ ಆಯವ್ಯಯದಲ್ಲಿ ಅನುದಾನ ಕೊರತೆಯಿರುವ ಕಾರಣ ಆರ್ಥಿಕ ಇಲಾಖೆಯಿಂದ 3ನೇ ಕಂತಿನಲ್ಲಿ ಒದಗಿಸಿಕೊಳ್ಳಲಾದ ಪೂರಕ ಅಂದಾಜು ಅನುದಾನ ರೂ.863.00 ಲಕ್ಷಗಳು ಸೇರಿ ಒಟ್ಟು ರೂ.1479.91 ಲಕ್ಷಗಳು ಬಿಡುಗಡೆಗೆ ಲಭ್ಯವಿದ್ದು, ಸದರಿ ಮೊತ್ತ ರೂ. 1479.91 ಲಕ್ಷಗಳ ಪೈಕಿ ರೂ.1479.88 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 173 ಪವಯೋ 2012, ದಿನಾಂಕ:26-03-2013**

2012-13ನೇ ಸಾಲಿನ ಪರಿಶಿಷ್ಟ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವೇತನಕ್ಕಾಗಿ ಭಾರತ ಸರ್ಕಾರವು ಮೊದಲನೇ ಕಂತಾಗಿ ಮಂಜೂರು ಮಾಡಿರುವ ರೂ.1479.88 ಲಕ್ಷಗಳನ್ನು (ಹದಿನಾಲ್ಕು ಕೋಟಿ ಎಪ್ಪತ್ತೊಂಬತ್ತು ಲಕ್ಷದ ಎಂಬಂತ್ತೆಂಟು ಸಾವಿರ ರೂಪಾಯಿಗಳು ಮಾತ್ರ) ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಈ ಸಂಬಂಧದ ವೆಚ್ಚವನ್ನು 2012-13ನೇ ಸಾಲಿನ ಜಿಲ್ಲಾವಲಯ ಯೋಜನಾ ಲೆಕ್ಕಶೀರ್ಷಿಕೆ 2225-02-197-6-03 (ಯೋಜನೆ) ಅಡಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರಿಗೆ ಬಿಡುಗಡೆಗೊಳಸಲಾಗಿದೆ.

ಈ ಉದ್ದೇಶಕ್ಕಾಗಿ ಬಿಡುಗಡೆಯಾದ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಪೂರ್ಣವಾಗಿ ಬಳಕೆ ಮಾಡಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಕಾಕ 223 ಆಂಆಸ 2012, ದಿನಾಂಕ:14-03-2013ರಲ್ಲಿ ನೀಡಿದ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಎ 307 ವೆಚ್ಚ-3/13 ದಿನಾಂಕ 25-03-203 ರಲ್ಲಿ ನೀಡಿದ ಸಹಮತಿಯ ಮೇರೆಗೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 04 ಟಿಎಫ್‌ಪಿ 2012, ದಿನಾಂಕ:27-06-2012ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕಪರಿಶೋಧನೆ-2)ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3) ಎಲ್ಲಾ ಜಿಲ್ಲಾಧಿಕಾರಿಗಳು.
4) ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
5) ಎಲ್ಲಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.

(3–5: ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರ ಮುಖಾಂತರ)

6) ಉಪನಿರ್ದೇಶಕರು, ಖಜಾನೆ ಗಣಕ ಜಾಲ, ಖನಿಜಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳ ಶಾಖೆ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಉಪ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ.
12) ಹೆಚ್ಚುವರಿ ಪ್ರತಿ.

II

೦

# ಅನುಬಂಧ

2012-13ನೇ ಸಾಲಿನಲ್ಲಿ ಕೇಂದ್ರ ಯೋಜನೆಯಡಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿ ಕುರಿತು ಜಿಲ್ಲಾವಾರು ಮೊದಲನೇ ಕಂತಿನ ಅನುದಾನ ಬಿಡುಗಡೆ ವಿವರಗಳು

(ರೂ.ಲಕ್ಷಗಳಲ್ಲಿ)

| ಅಬ್ಜೆಕ್ಟೀವ್ ಕೋಡ್ | ಜಿಲ್ಲೆಗಳು | 2012-13ನೇ ಸಾಲಿನಲ್ಲಿ ಮೊದಲನೇ ಕಂತಿನ ಅನುದಾನ ಬಿಡುಗಡೆ ವಿವರ |
|---|---|---|
| 1 | 2 | 3 |
| 401 | ಬೆಂಗಳೂರು (ನ) | 363.85 |
| 402 | ಬೆಂಗಳೂರು (ಗ್ರಾ) | 12.00 |
| 403 | ಚಿತ್ರದುರ್ಗ | 152.50 |
| 404 | ಕೋಲಾರ | 20.00 |
| 405 | ಶಿವಮೊಗ್ಗ | 43.75 |
| 406 | ತುಮಕೂರು | 27.00 |
| 451 | ದಾವಣಗೆರೆ | 100.00 |
| 452 | ರಾಮನಗರ | 15.00 |
| 453 | ಚಿಕ್ಕಬಳ್ಳಾಪುರ | 80.91 |
| 407 | ಮೈಸೂರು | 78.06 |
| 408 | ಚಿಕ್ಕಮಗಳೂರು | 20.00 |
| 409 | ದಕ್ಷಿಣಕನ್ನಡ | 40.00 |
| 410 | ಹಾಸನ | 25.00 |
| 411 | ಕೊಡಗು | 10.00 |
| 412 | ಮಂಡ್ಯ | 6.80 |
| 456 | ಚಾಮರಾಜನಗರ | 62.50 |
| 457 | ಉಡುಪಿ | 25.00 |
| 413 | ಬೆಳಗಾಂ | 50.85 |
| 414 | ಬಿಜಾಪುರ | 10.00 |
| 415 | ಧಾರವಾಡ | 22.60 |
| 416 | ಉತ್ತರಕನ್ನಡ | 2.27 |
| 461 | ಬಾಗಲಕೋಟೆ | 17.74 |
| 462 | ಗದಗ್ | 25.00 |
| 463 | ಹಾವೇರಿ | 16.10 |
| 417 | ಗುಲ್ಬರ್ಗಾ | 5.00 |
| 418 | ಬಳ್ಳಾರಿ | 82.15 |
| 419 | ಬೀದರ್ | 45.00 |
| 420 | ರಾಯಚೂರು | 94.60 |
| 421 | ಯಾದಗೀರ್ | 14.20 |
| 466 | ಕೊಪ್ಪಳ | 12.00 |
| | ಒಟ್ಟು | 1479.88 |

(ಹದಿನಾಲ್ಕು ಕೋಟಿ ಎಪ್ಪತ್ತೊಂಭತ್ತು ಲಕ್ಷಗಳ ಎಂಭತ್ತೆಂಟು ಸಾವಿರ ರೂಪಾಯಿಗಳು ಮಾತ್ರ)

(ಎನ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ

26/3